SRI DEVARAJ URS ACADEMY OF HIGHER EDUCATION & RESEARCH

SRI DEVARAJ URS MEDICAL COLLEGE

Tamaka, Kolar

**UNIVERSITY LIBRARY & LEARNING RESOURCE CENTRE**

ಸಂಯುಕ್ತ ಕರ್ನಾಟಕ

**Online Newspaper Clipping Service**

**Dtd-Friday,30th , June 2023**

**Page No.04**

# ಉತ್ತಮ ಚಿಕಿತ್ಸೆಯಿಂದ ತೊನ್ನು ರೋಗ ನಿವಾರಣೆ

ಸಂ.ಕ ಸಮಾಚಾರ, ಕೋಲಾರ

ಟಮಕದ ಶ್ರೀದೇವರಾಜ ಅರಸ್ ವೈದ್ಯಕೀಯ ವಿಶ್ವ ವಿದ್ಯಾಲಯದ ಚರ್ಮರೋಗ ವಿಭಾಗದಿಂದ ವಿಶ್ವ ತೊನ್ನು ರೋಗ ನಿವಾರಣೆ ದಿನಾಚರಣೆ ನಡೆಯಿತು.

ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ||ರಾಜಶೇಖರ್ ಮಾತನಾಡಿ ತೊನ್ನು ರೋಗದ ಕುರಿತು ಮೂಢನಂಬಿಕೆ ತೊರೆದು ಚಿಕಿತ್ಸೆ ಪಡೆದರೆ ಕಾಯಿಲೆಯಿಂದ ಮುಕ್ತವಾಗಬಹುದು ಎಂದು ನುಡಿದರು.

ತೊನ್ನುರೋಗವು ಒಬ್ಬರಿಂದ ಒಬ್ಬರಿಗೆ ಹರಡುವುದಿಲ್ಲ. ಸರಾಸರಿ 1% ಜನರಲ್ಲಿ ಬಿಳಿತೊನ್ನು ಇರುತ್ತದೆ ಹಾಗೂ ಇದನ್ನು ಒಳ್ಳೆಯ ಔಷಧಿಗಳು ಮತ್ತು ಶಸ್ತ್ರಚಿಕಿತ್ಸೆಯಿಂದ ಗುಣಪಡಿಸಬಹುದು ಎಂದು ತಿಳಿಸಿದರು.

ಡಾ||ಹನುಮಂತಯ್ಯ ಮಾತನಾಡಿ ಔಷಧಿಗಳ ಜೊತೆ ಊಟದಲ್ಲಿ ಮೊಳಕೆಯೊಡೆದ ತಾಜಾ ಮೊಳಕೆಕಾಳು ಹಾಗೂ ಸವಿಯಾದ ಮಜ್ಜಿಗೆಯನ್ನು ಕುಡಿಯಬೇಕು ಎಂದು ಸಲಹೆ ಮಾಡಿದರು.




ಜಾಲಪ್ಪ ಆಸ್ಪತ್ರೆ ಉಪವೈದ್ಯಕೀಯ ಅಧೀಕ್ಷಕ ಡಾ||ದಿನೇಶ್.ಕೆ ಮಾತನಾಡಿ ಈ ರೋಗವು ಯಾವುದೇ ಶಾಪದಿಂದ ಬರುವುದಿಲ್ಲ. ಇದೊಂದು ಸಾಮಾನ್ಯವಾದ ಮತ್ತು ಗುಣಪಡಿಸಬಹುದಾದ ಚರ್ಮಕಾಯಿಲೆ. ಈ ರೀತಿಯ ಸಮಸ್ಯೆಯಿಂದ ನರಳುವವರು ಆಸ್ಪತ್ರೆಯ ಚರ್ಮರೋಗ ವಿಭಾಗದಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕೆಂದರು.

ವೈದ್ಯಕೀಯ ಅಧೀಕ್ಷಕ ಡಾ||ಜೆ.ಕೃಷ್ಣಪ್ಪ ಮಾತನಾಡಿ ಜಾಲಪ್ಪ ಆಸ್ಪತ್ರೆಯಲ್ಲಿ ಗ್ರಾಮೀಣ ಪ್ರದೇಶದ ಬಡ ರೋಗಿಗಳಿಗೆ ಹೈಟೆಕ್ ಚಿಕಿತ್ಸೆ ದೊರಕುತ್ತಿದ್ದು ಎಲ್ಲರೂ ಸದುಪಯೋಗ ಮಾಡಿಕೊಳ್ಳಬೇಕೆಂದು ಕೋರಿದರು.

ನಿವಾಸಿ ವೈದ್ಯರಾದ ಡಾ||ಶ್ರೀನಿವಾಸರೆಡ್ಡಿ, ಡಾ||ಸುರೇಶ್‌ಕುಮಾರ್, ಡಾ||ವೈಷ್ಣವಿ ಮತ್ತು ಡಾ||ಸ್ವಾತಿ ಡಾ.ಸುಶ್ಮಿತ ಉಪಸ್ಥಿತರಿದ್ದರು.